ಸಾಗರದಿಂದ ಛತರಪುರ ಮಾರ್ಗವಾಗಿ ಖಜುರಾಹೋಗೆ ಹೋಗಬಹುದಿತ್ತು. ಮಾರ್ಗ ತುಂಬಾ ಹಾಳಾಗಿತ್ತು. ಛತರಪುರದ ನಾಲ್ಕು ಗಂಟೆಯ ಪ್ರಯಾಣವನ್ನು ಏಳು ಗಂಟೆಗಳ ಕಾಲ ಮಾಡಬೇಕಾಯಿತು. ಕಾರಿನಲ್ಲಿ ಕೂತು ಕೂತು ಸೊಂಟದ ನೋವು ಕಾಡಿತು. ಕಾರನ್ನು ಅಲ್ಲಿಯೇ ನಿಲ್ಲಿಸಿ ನಡೆದುಕೊಂಡು ಹೋಗಲು ಮನಸ್ಸಾಗುತ್ತದೆ. ನಾನು ಸರ್ಕಾರಕ್ಕೆ ನೂರಾರು ಹಿಡಿ ಶಾಪಗಳನ್ನು ಹಾಕಿದೆ.

'ಸರ್ಕಾರದಲ್ಲಿ ಕೂತವರಿಗೆ ಈ ರಸ್ತೆಗಳು ಏಕೆ ಕಾಣಿಸಲ್ಲ?' ನಾನು ರೇಗುತ್ತಾ ಖುಷಭರನ್ನು ಕೇಳಿದೆ.

'ಇದು ಗುತ್ತಿಗೆದಾರರ ಕೈಚಳಕ, ಒಂದೇ ಮಳೆಗೆ ರಸ್ತೆ ಎಲ್ಲಿತ್ತು ಎಂಬುದೇ ತಿಳಿಯುವುದಿಲ್ಲ' ಎಂದರು ಖುಷಭ್.

'ಗುತ್ತಿಗೆದಾರರ ಆಯ್ಕೆಯನ್ನು ಸರ್ಕಾರದಲ್ಲಿ ಕೂತವರೇ ಮಾಡ್ತಾರೆ, ಗುತ್ತಿಗೆದಾರರು ಅವರ ಸಂಬಂಧಿಕರೇ ಆಗಿರುತ್ತಾರೆ', ನನ್ನ ಸಿಟ್ಟು ಕಡಿಮೆಯಾಗುತ್ತಿರಲಿಲ್ಲ.

'ಅದಕ್ಕೇ ಲೋಕಪಾಲರನ್ನು ನೇಮಿಸುವ ಬಗ್ಗೆ ಕೂಗು ಎದ್ದಿತು'.

'ಲೋಕಪಾಲರಿಂದ ಬದಲಾವಣೆ ಆಗುತ್ತಾ? ಪೊಲೀಸರಿದ್ದರೆ ಕಳ್ಳತನವಾಗುವುದಿಲ್ಲವೇ?' ನಾನು ವಾದಿಸಿದೆ.

'ಆದರೂ ವ್ಯತ್ಯಾಸವನ್ನು ಕಾಣಬಹುದು.'

'ಓಹೋ!, ಏನು ವ್ಯತ್ಯಾಸ ಬರುತ್ತೆ?' ನಾನು ವ್ಯಂಗ್ಯದಿಂದ ಕೇಳಿದೆ.

'ಜನ ಹೆದರ್ತಾರೆ' ಖುಷಭ್ ಒಂದು ಪೊಳ್ಳು ತರ್ಕವನ್ನು ಹೇಳಿದರು.

'ಯಾರಿಗೆ?'

'ಕಾನೂನಿಗೆ'

'ಈಗ ಹೆದರ್ತಾರ?'

ಹೂಂ, ಎಲ್ಲರೂ ಕಾನೂನನ್ನು ಪಾಲಿಸ ಬೇಕಾಗುತ್ತೆ, ಒಂದು ವೇಳೆ ಕಾನೂನು ವ್ಯವಸ್ಥೆ ಇಲ್ಲದಿದ್ರೆ, ದೊಡ್ಡ ದೊಡ್ಡ ಮಂತ್ರಿಗಳು ಜೈಲಿಗೆ ಹೋಗುತ್ತಿದ್ದರೆ?' ಖುಷಭರು ಉದಾಹರಣೆಯೊಂದಿಗೆ ಹೇಳಿದರು.

'ಅದೆಲ್ಲ ದೊಡ್ಡ ಮಟ್ಟದ ಆಟ, ಜಸ್ಟ್ ಲೈಕ್ ಗ್ಯಾಂಗ್‌ವಾರ್...'

'ನೀವು ಇದೇನು ಹೇಳ್ತಿದ್ದೀರ?' ಖುಷಭ್ ಆಶ್ಚರ್ಯದಿಂದ ನನ್ನನ್ನು ನೋಡಿದರು.

'ಸಾರಿ, ಈ ರಸ್ತೆ ನೋಡಿ ನನ್ನ ತಲೆ ಕೆಟ್ಟು ಹೋಗಿದೆ. ಈ ನಿಯಮ ಕಾನೂನು ನಿಮ್ಮ ಮತ್ತು ನನ್ನಂಥ ಸಭ್ಯ ನಾಗರಿಕರಿಗೆ ಮಾತ್ರ ಇರುತ್ತವೆ ಎಂಬುದನ್ನು ನೀವು ಅಲ್ಲಗಳೆಯಲು ಸಾಧ್ಯವಿಲ್ಲ. ಏಕೆಂದರೆ ನಮಗೆ ಕಾನೂನನ್ನು ಮುರಿಯುವುದು ಗೊತ್ತೇ ಇಲ್ಲ. ಕಾನೂನು ಮುರಿಯುವವರೆಗೆ ಕೆಲವೊಮ್ಮೆ ಮಾತ್ರ, ಅವರ ದುರದೃಷ್ಟದಿಂದ ತೊಂದ್ರೆಯಾಗುತ್ತೆ' ಎಂದೆ.

'ನೀವು ತುಂಬಾ ನೆಗೆಟಿವ್ ಆಗಿ ಯೋಚ್ನೆ ಮಾಡ್ತೀರ' ಎಂದರು ಖುಷಭ್.

'ಯಾರ ಜೀವನದಲ್ಲಿ ಅಲ್ಪ ಸ್ವಲ್ಪ ಸಕಾರಾತ್ಮಕತೆ ಬರುವುದೋ, ಅವರು ಸಕಾರಾತ್ಮಕವಾಗಿ ಯೋಚಿಸಲು ಸಾಧ್ಯ, ಇಲ್ಲದಿದ್ದಲ್ಲಿ ನನ್ನ ಹಾಗೆಯೇ ಯೋಚಿಸುತ್ತಾರೆ, ಇದನ್ನು ನೀವು ಬೇಕಾದರೆ ನೆಗೆಟಿವ್ ಅಂತ ಹೇಳಿ...' ಖುಷಭರು ಮೌನವಹಿಸಿದರು. ಅವರು ಬಹುಶಃ ಈ ವಾದವನ್ನು ಮುಂದುವರೆಸಲು ಬಯಸುತ್ತಿರಲಿಲ್ಲ.

'ಛತರಪುರದ ನಂತರದ ಮಾರ್ಗ ಚೆನ್ನಾಗಿದೆ', ಸ್ವಲ್ಪ ಹೊತ್ತಿನ ನಂತರ ಖುಷಭರು ಹೇಳಿದರು. ಅವರು ಸಹ ರಸ್ತೆಯ ಅನುಭವವನ್ನು ಪಡೆದಿದ್ದರು. ಖುಷಭರ ಮಾತು ನಿಜವಾಯಿತು. ಛತರಪುರದ ನಂತರ ರಸ್ತೆ ಚೆನ್ನಾಗಿಯೇ ಇತ್ತು. ನಾವು ಛತರಪುರದಿಂದ ಮುಂದಿನ ಬಮೀಠಾಕ್ಕೆ ಬಂದು ಖಜುರಾಹೋ ಕಡೆಗೆ ಹೊರಳಿದೆವು. ಅಲ್ಲಿಂದ ರಸ್ತೆ ಇನ್ನೂ ಚೆನ್ನಾಗಿತ್ತು. ಖಜುರಾಹೋದ ಗಡಿಯನ್ನು ತಲುಪುತ್ತಲೇ ಸುಂಕದ ಗೇಟ್ ಬಳಿ ಟ್ಯಾಕ್ಸ್ ಕಟ್ಟಬೇಕಾಯಿತು. ಖರ್ಚಿನ ಕ್ರಮ ಅಲ್ಲಿಂದಲೇ ಆರಂಭಗೊಂಡಿತು.

ನಾವು ಮಾರ್ಗದಲ್ಲಿ ವಿಚಾರಿಸುತ್ತಾ ಮಂದಿರಗಳವರೆಗೆ ಬಂದೆವು. ಹಿಂದೂ ಮಂದಿರದ ಪರಿಸರದಿಂದ ಸ್ವಲ್ಪ ದೂರದಲ್ಲಿ ನಮ್ಮ ಕಾರು ಪಾರ್ಕಿಂಗ್ ಆಗಿತ್ತು. ಅಲ್ಲಿ ಕಾರನ್ನು ನಿಲ್ಲಿಸುತ್ತಲೇ ಹೀರೊ ಟೈಪಿನ ಹುಡುಗನೊಬ್ಬ ಅಲ್ಲಿಗೆ ಬಂದು, ಒಂದು ರಶೀತಿಯನ್ನು ಕಾರಿನ ವಿಂಡ್‌ಶೀಲ್ಡ್‌ನ ವೈಪರ್ ಬಳಿ ಹಾಕಿದ. ಇನ್ನೊಂದನ್ನು ಖುಷಭನ ಕೈಗೆ ಹಾಕಿದ. ಮರಳಿ ಬರುವಾಗ ಹಣ ಕೊಡಬೇಕೆಂಬುದು ಸ್ಪಷ್ಟವಾಗಿತ್ತು. ಖುಷಭರು ರಶೀತಿಯನ್ನು ಶರ್ಟಿನ ಜೇಬಿನೊಳಗೆ ಇಟ್ಟುಕೊಂಡರು.

'ಮೊದಲು ನಾವು ಹೊಟೇಲ್ ನೋಡಿಕೊಂಡು ಬರೋಣ' ಎಂದರು ಖುಷಭ್.

'ಅಲ್ಲೇನು ನೋಡಬೇಕು?' ನನಗೆ ಆಶ್ಚರ್ಯವಾಯಿತು. ಖುಷಭರ ಮಾತು ನನಗೆ ಅರ್ಥವಾಗಲಿಲ್ಲ. ಪಾರ್ಕಿಂಗ್‌ನಿಂದ ಕಾಣಬರುತ್ತಿದ್ದ ಮಂದಿರಗಳು ನನ್ನ ಗಮನವನ್ನು ಸೆಳೆಯುತ್ತಿದ್ದವು. ಇದಕ್ಕೆ ಮೊದಲು ಅವುಗಳನ್ನು ಚಿತ್ರದಲ್ಲಷ್ಟೇ ನೋಡಿದ್ದೆ.

'ಹೊಟೇಲ್ ಸರಿ ಇದೆಯೋ, ಇಲ್ಲವೋ ಅಂತ ನೋಡೋಣ' ಎಂದರು ಖುಷಭ್.

'ನೀವು ರಿಸರ್ವೇಶನ್ ಮಾಡಿಸಿದ್ದೀರಲ್ಲ?'

'ಹೌದು'

'ಮತ್ಯಾಕೆ ಯೋಚ್ನೆ ಮಾಡ್ತಿದ್ದೀರ?'

'ಆನ್‌ಲೈನ್‌ನಲ್ಲಿ ಮಾಡಿಸಿದ್ದೆ... ಒಮ್ಮೊಮ್ಮೆ ಅದರಲ್ಲೂ ಮೋಸವಾಗುತ್ತೆ', ಖುಷಭ್ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದರು.

'ಭಯವಿದ್ದರೆ ಆನ್‌ಲೈನ್‌ನಲ್ಲೇಕೆ ಮಾಡಿಸಿದಿರಿ?' ನಾನು ರೇಗಿದೆ.

'ಬೇರೆ ಮಾರ್ಗವಿರಲಿಲ್ಲ'.

'ಸರಿ, ನಡೀರಿ ಹೋಗೋಣ', ನಾನು ಮತ್ತೆ ಹೋಗಿ ಕಾರಿನಲ್ಲಿ ಕೂತೆ. ನಂತರ ಪಾರ್ಕಿಂಗ್‌ನ ಹುಡುಗನನ್ನು ಕರೆದು ಹೇಳಿದೆ, 'ನೋಡಪ್ಪಾ, ಈ ನಿನ್ನ ರಶೀತಿಯನ್ನು ತೆಗೆದು ಹಾಕು. ನಾವು ಸ್ವಲ್ಪ ಹೊತ್ತಿನ ನಂತರ ಬರ್ತೀವಿ'. ಹುಡುಗ ಬಳಿಗೆ ಬಂದು ವೈಪರ್‌ಗೆ ಸಿಗಿಸಿದ್ದ ರಶೀತಿಯನ್ನು ತೆಗೆಯುತ್ತಾ ಹೇಳಿದ, 'ಟ್ವೆಂಟಿ ಪ್ಲೀಸ್'.

'ಟ್ವೆಂಟಿ ಪ್ಲೀಸ್ ಏಕೆ? ನಾವಿನ್ನು ದೇವಸ್ಥಾನಕ್ಕೇ ಹೋಗಿಲ್ಲ, ಎರಡು ನಿಮಿಷಗಳಷ್ಟೇ ಕಾರು ನಿಲ್ಲಿಸಿದ್ದೇವೆ'.

'ಇದು ಪಾರ್ಕಿಂಗ್. ನೀವಿಲ್ಲಿ ನಿಮ್ಮ ಗಾಡಿಯನ್ನು ಪಾರ್ಕ್ ಮಾಡಿದ್ದೀರ, ಹೀಗಾಗಿ ನೀವು ದುಡ್ಡನ್ನು ಕೊಡ್ಲೇ ಬೇಕು'. ಹುಡುಗ ಆಗ್ರಹಿಸಿದ.

'ಇದೊಳ್ಳೆ ಗೂಂಡಾಗಿರಿ!' ನನ್ನ ಮೂಡ್ ಹಾಳಾಯಿತು.

'ಹೋಗ್ಲಿ ಬಿಡಿ' ಎನ್ನುತ್ತಾ ಖುಷಭರು ತಮ್ಮ ಜೇಬಿನಿಂದ ದುಡ್ಡನ್ನು ಹೊರತೆಗೆದು, ಹತ್ತು ಹತ್ತರ ಎರಡು ನೋಟುಗಳನ್ನು ಹುಡುಗನ ಕೈಗೆ ಹಾಕಿದರು.

'ಇನ್ನು ಸ್ವಲ್ಪ ಹೊತ್ತಿಗೆ ನಾವಿಲ್ಲಿಗೆ ಬರ್ತೀವಿ' ಖುಷಭರು ಆ ಹುಡುಗನಿಗೆ ಹೇಳಿದರು.

'ನೀವು ಬೇಕಾದಷ್ಟು ಸಲ ಬನ್ನಿ ಸಾರ್! ಆದ್ರೆ ಪ್ರತಿ ಸಲವೂ ನೀವು ದುಡ್ಡು ಕೊಡಬೇಕಾಗುವುದು' ಹುಡುಗ ಹೆಗಲು ಕುಣಿಸುತ್ತಾ ಹೇಳಿದ. ಹುಡುಗ ಇಂಗ್ಲಿಷ್ ಮಾತನಾಡಲು ಪ್ರಯತ್ನಿಸುತ್ತಿದ್ದ. ಅವನು ಖಜುರಾಹೋಗೆ ಬರುವ ವಿದೇಶಿ ಯಾತ್ರಿಕರೊಂದಿಗೂ ಯೋಚನೆ ಮಾಡಿ ಮಾತನಾಡಬೇಕಿತ್ತು. ನಂತರ ನನ್ನ ಗಮನ ಇಬ್ಬರು ವಿದೇಶಿ ಮಹಿಳೆಯರ ಮೇಲೆ ಬಿತ್ತು; ಅವರಲ್ಲಿ ಒಬ್ಬಳು ತೆರೆದ ಹೆಗಲುಗಳ ಟ್ಯೂಬ್ ಟಾಪ್ ಮಾತ್ರ ಧರಿಸಿದ್ದಳು. ಇನ್ನೊಬ್ಬಳು, ತೆಳು ದಾರಗಳ ಹೋಜರಿಮೇಡ್ ಬನಿಯನ್ನಿನಂಥ ಅಂಗಿ ಧರಿಸಿದ್ದಳು. ಇಬ್ಬರೂ ಬ್ರಾ ಧರಿಸಿರಲಿಲ್ಲ. ಅವರು ತಮ್ಮತಮ್ಮ ಶರ್ಟ್‌ಗಳನ್ನು ಕಳಚಿ ಜೀನ್ಸ್ ಮೇಲೆ ಕಟ್ಟಿದ್ದರು. ಅವರ ಮುಖದ ಹಾವಭಾವಗಳಿಂದ, ತಮಗೆ ಜಗತ್ತಿನ ಯಾವುದೇ ಚಿಂತೆಯಿಲ್ಲ, ತಮಗೆ ಇಷ್ಟವಾದ ಹಾಗೂ ಆರಾಮದಾಯಕ ಉಡುಪುಗಳನ್ನು ತಾವು ಧರಿಸಿದ್ದೇವೆ ಎಂಬುದು ವ್ಯಕ್ತವಾಗುತ್ತಿತ್ತು.

ನಾನು ಇಂಥ ಉಡುಪುಗಳನ್ನು ಧರಿಸಬಲ್ಲನೇ? ಇಲ್ಲ, ಒಂದು ವೇಳೆ ನಾನು ನನ್ನ ಹೊರವಸ್ತ್ರವನ್ನು ಕಳಚಿದರೆ, ಈ ಕೂಡಲೇ ಖುಷಭರು ತಮ್ಮ ಶರ್ಟ್

